**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 1012/2022**

| | | | |
|---|---|---|---|
| **ಹೆಸರು** | **:** | **ಗುರನಾಥ** | ಚಾ.ಸಾ. 4 |
| **ತಂದೆಯ ಹೆಸರು** | **:** | **ಶ್ರೀಮಂತ** | ಪ್ರಾ.ಸಾ. 2 |
| **ವಯಸ್ಸು** | **:** | **32 ವರ್ಷ** | ದಿನಾಂಕಃ 23-09-2024 |
| **ಉದ್ಯೋಗ** | **:** | **ವ್ಯವಸಾಯ** | |
| **ವಾಸಸ್ಥಳ** | **:** | **ಪರದಾರ ಮೋತಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಪ್ರಾಸಾ 1, ಚಾಸಾ 5 ಮತ್ತು 6 ರವರು ನನ್ನ ಸಂಬಂಧಿಕರು. ಚಾಸಾ 7 ನಮ್ಮ ಗ್ರಾಮದವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಸಂಬಂಧಿಕರು.

ಈಗೆ 2-3 ವರ್ಷಗಳ ಹಿಂದೆ ಸಾಯಂಕಾಲ 7 ಗಂಟೆ ಸುಮಾರಿಗೆ ನಾನು ಪರದಾರಮೋತಕಳ್ಳಿಯಲ್ಲಿರುವ ನಮ್ಮ ಮನೆಯ ಒಳಗೆ ಇದ್ದಾಗ ಪ್ರಾಸಾ 1 ರವರು ಹೊಲದಿಂದ ತಮ್ಮ ಮನೆಗೆ ಮನೆಯ ಮುಖಾಂತರವಾಗಿ ಹೋಗುತ್ತಿದ್ದಾಗ 1 ಮತ್ತು 2ನೇ ಆರೋಪಿತರು ಪ್ರಾಸಾ 1 ರವರ ಜೊತೆ ಜಗಳ ಮಾಡಿರುತ್ತಾನೆ. ಆಗ 1ನೆ ಆರೋಪಿ ಪ್ರಾಸಾ 1 ರವರ ಕೈಕಾಲು ಎಳೆದಾಡಿ ಹೊಲ ಕೊಡದೇ ಇದ್ದರೇ ನಿನಗೆ ಮತ್ತು ಚಾಸಾ 5 ರವರಿಗೆ ಹೊಡೆಯುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ. ಅಷ್ಟರಲ್ಲಿ ಪ್ರಾಸಾ 1 ರವರು ಕಿರಚಿದಾಗ ನಾನು ಮತ್ತು ಚಾಸಾ 6 ರವರು ಮನೆಯಿಂದ ಹೊರಗೆ ಬಂದು ಜಗಳವನ್ನು ಬಿಡಿಸಿರುತ್ತೇವೆ. ನಂತರ ಆರೋಪಿತರು ತಮ್ಮ ಮನೆಗೆ ಹೋಗಿರುತ್ತಾರೆ.

ನಂತರ ಸಾಯಂಕಾಲ 7-30 ಗಂಟೆಗೆ ನಾನು, ಪ್ರಾಸಾ 1 ಮತುತ ಚಾಸಾ 6 ರವರು ಸೇರಿ ಪೋಲಿಸ ಠಾಣೆಗೆ ಹೋದಾಗ ಪೋಲಿಸರು ಮರುದಿನ ಬರಲು ತಿಳಿಸಿದರು. ನಂತರ ಮರುದಿನ ಪೋಲಿಸರು ಬೆಳಿಗ್ಗೆ 9 ಗಂಟೆಗೆ ಬಂದು ನಮ್ಮ ಮನೆ ಹತ್ತಿರ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡಲು ಸ್ಥಳಕ್ಕೆ ಚಾಸಾ 10 ರವರು ಬಂದಿದ್ದರು. ಪೋಲಿಸರು ನನಗೆ ಕೇಳಿದಾಗ ಘಟನೆ ಬಗ್ಗೆ ಹೇಳಿದ್ದೇನೆ. ಜಗಳವಾದ ಸ್ಥಳ ಈಗ ನೋಡುತ್ತಿರುವ ಭಾವಚಿತ್ರದಲ್ಲಿ ಇದೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ವಕೀಲರು ಗೈರು ಹಾಜರಿರುವ ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.</u>**

**ಮರುವಿಚಾರಣೆಃ ಇಲ್ಲಾ .**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**